

## ಭಾರತದಲ್ಲಿ...

ಬೆಂಗಳೂರಿನ ಕೆನರಾ ಬ್ಯಾಂಕ್ ಗ್ರಾಹಕರಿಗೆ ನೆರವು ನೀಡಲು ಕ್ಯಾಂಡಿ ಹಾಗೂ ಮಿತ್ರಾ ಎಂಬ ಹ್ಯೂಮನಾಯ್ಡ್ ರೊಬೋಟ್‌ಗಳನ್ನು ಪರಿಚಯಿಸಿದೆ. ಜೆ.ಸಿ.ರಸ್ತೆಯ ಬ್ಯಾಂಕ್‌ನಲ್ಲಿ ಮಿತ್ರಾ ಕನ್ನಡದಲ್ಲಿ ಸೂಚನೆಗಳನ್ನು ನೀಡಿದರೆ, ಎಂ.ಜಿ.ರಸ್ತೆಯಲ್ಲಿರುವ ಕ್ಯಾಂಡಿ ಇಂಗ್ಲಿಷ್‌ನಲ್ಲಿ ನೆರವು ನೀಡುತ್ತದೆ. 'ಮಾನವ್' ಭಾರತದ ಮೊದಲ ಹ್ಯೂಮನಾಯ್ಡ್ ರೊಬೋಟ್. ಅಮೆರಿಕ, ಜಪಾನ್, ಬ್ರಿಟನ್, ಚೀನಾ ಮೊದಲಾದ ದೇಶಗಳಿಗೆ ಹೋಲಿಸಿದರೆ ಭಾರತ ಈ ವಿಷಯದಲ್ಲಿ ಹಿಂದಿದೆ ಎನ್ನಬಹುದು.

ನಾವು ಮಾನವರು ಹೆಚ್ಚು ಬುದ್ಧಿವಂತಿಕೆ, ಮಾನವ ಸ್ಪರ್ಷ ಬೇಡುವಂತಹ ಆರೋಗ್ಯ, ಶಿಕ್ಷಣ ಮೊದಲಾದ ಕ್ಷೇತ್ರಗಳಲ್ಲಿ ದುಡಿಯೋಣ ಎಂಬ ನಿರುಮ್ಮಳ ಭಾವ ಹಲವರದು. ನಿಜವಾಗಲೂ ಪರಿಸ್ಥಿತಿ ಆ ರೀತಿ ಇದೆಯಾ?

ಭವಿಷ್ಯದಲ್ಲಿ, ಅಂದರೆ ದೂರದ ಭವಿಷ್ಯವಲ್ಲ, ಇನ್ನು ಕೆಲವೇ ವರ್ಷಗಳಲ್ಲಿ ರೊಬೋಡಾಕ್ಟರ್ ಎಂಬ ಶಬ್ದದ ಬಳಕೆ ಮಾಮೂಲಾಗಿಬಿಡುತ್ತದೆ. ಏಕೆಂದರೆ ಕಾಯಿಲೆಯನ್ನು ಅದು ಕರಾರುವಾಕ್ಕಾಗಿ ಗುರುತಿಸಿ ಚಿಕಿತ್ಸೆ ನೀಡುತ್ತದೆ ಎಂಬುದು ರೋಬೊ ಸೃಷ್ಟಿಕರ್ತರ ವಾದ. ಅದು ಈಗಾಗಲೇ ಸಾಬೀತಾಗಿದೆ. ಬೆಂಗಳೂರಿನಲ್ಲಿ ಕೂಡ ಹಲವು ಹೈಟೆಕ್ ಆಸ್ಪತ್ರೆಗಳಲ್ಲಿ ರೊಬೋಟಿಕ್ ಸರ್ಜರಿ ನಡೆಯುತ್ತಿದೆ. ಇದನ್ನು ಗಣನೆಗೆ ತೆಗೆದುಕೊಂಡರೆ ಕೆಲವು ಕ್ಷೇತ್ರಗಳಲ್ಲಿ ಯಂತ್ರಗಳ ಬಳಕೆ ಕಡ್ಡಾಯವಾಗಬಹುದು. ಸೋಮಾರಿ ಮನುಷ್ಯರಿಗಿಂತ ಅವುಗಳೇ ಚೆನ್ನಾಗಿ ನಿರ್ವಹಿಸಬಹುದು. ಆದರೆ ಯುವ ಜನಾಂಗಕ್ಕೆ ಯಾವ ರೀತಿಯ ಶಿಕ್ಷಣ ನೀಡಬೇಕು, ಅವರನ್ನು ಯಾವ ರೀತಿಯ ಉದ್ಯೋಗಕ್ಕೆ ಸಜ್ಜುಗೊಳಿಸಬೇಕು ಎಂಬುದು ಸದ್ಯಕ್ಕಿರುವ ಸವಾಲು. ಉತ್ತಮ ಶಿಕ್ಷಣಕ್ಕೆ ಕೃತಕ ಬುದ್ಧಿಮತ್ತೆ ಬಳಕೆ ಸೂಕ್ತ ಎಂಬ ಸಲಹೆಗಳೂ ಕೇಳಿ ಬಂದಿವೆ. ಅಂದರೆ ಶಿಕ್ಷಣ ಕ್ಷೇತ್ರದಲ್ಲೂ ಮತ್ತದೇ ಯಂತ್ರಮಾನವರ ಪ್ರವೇಶ ಖಚಿತ ಎಂದಾಯ್ತು. ವಿದ್ಯಾರ್ಥಿಗಳ ಎದುರೇ ರೊಬೋಟ್ ಶಿಕ್ಷಕ/ ಶಿಕ್ಷಕಿ ನಿಲ್ಲುವ ಬದಲು ಹಿಂದೆ ನಿಲ್ಲುತ್ತದೆ ಅಷ್ಟೆ. ಕಪ್ಪು ಹಲಗೆಯ ಬದಲು ಬಿಳಿ ಹಲಗೆ! ಛಡಿ ಹಿಡಿದ ಶಿಕ್ಷಕರ ಬದಲು ಕೆಂಪು– ನೀಲಿ ಬೆಳಕು ಝುಳಪಿಸುವ ಯಂತ್ರ!

ಚಿಲ್ಲರೆ ವಹಿವಾಟು, ಹಣಕಾಸು ಉದ್ಯಮಗಳು ಮಾತ್ರ ಕೃತಕ ಬುದ್ಧಿಮತ್ತೆ ಅಭಿವೃದ್ಧಿಪಡಿಸುವತ್ತ ತಮ್ಮ ಚಿತ್ತ ನೆಟ್ಟಿವೆ. ಚಿಲ್ಲರೆ ಮಾರುಕಟ್ಟೆಯಲ್ಲಿ ಅಮೆಝಾನ್, ಜಾಹೀರಾತು ಕ್ಷೇತ್ರದಲ್ಲಿ ಗೂಗಲ್ ಹಾಗೂ ಫೇಸ್‌ಬುಕ್‌ನಂತಹವು ಸೃಷ್ಟಿಸಿದ ಸಂಚಲನೆ ಇದಕ್ಕೆ ಇಂಬು ನೀಡಿದೆ.

ಏನೇ ಇರಲಿ, 2020ರ ಹೊತ್ತಿಗೆ ಪೂರ್ಣ ಪ್ರಮಾಣದ ಹ್ಯೂಮನಾಯ್ಡ್ ರೊಬೋಟ್‌ಗಳು ಅಖಾಡಕ್ಕೆ ಇಳಿಯುವುದಂತೂ ಖಚಿತ. ಒಮ್ಮೆ ಹಿಂದೆ ತಿರುಗಿ ನೋಡಿ, ಸವಾಲುಗಳು, ಭಯ ಸೃಷ್ಟಿಸುವ ಸಂದರ್ಭಗಳು ಎದುರಾದಾಗಲೆಲ್ಲ ಹೊಸ ತಂತ್ರಜ್ಞಾನದ ಅವಿಷ್ಕಾರವಾಯಿತು. ಕಂಪ್ಯೂಟರ್, ಸ್ಮಾರ್ಟ್ ಫೋನ್, ಅಂತರ್ಜಾಲದಂತೆ ಈ ರೊಬೋಟ್‌ಗಳೂ ಕೂಡ ಅಷ್ಟೆ, ಕೆಲಸ ಸಲೀಸಾಗಲು ಹುಟ್ಟಿಕೊಂಡವು. ಈಗ ಬಿಟ್ಟೆನೆಂದರೂ ಬಿಡದಂತೆ ನಮ್ಮೊಳಗಿರುವ ಬಿಡಿಭಾಗಗಳಂತೆ ಅಂಟಿಕೊಂಡಿವೆ.

